# ರಾಘವಾಂಕನ ಸಿದ್ಧರಾಮ ಚಾರಿತ್ರೆಯಲ್ಲಿನ ವರ್ಣನೆ ಮತ್ತು ಶೈಲಿ ಕುರಿತಂತೆ ಒಂದು ಅವಲೋಕನ

**ವಿಜಯಲಕ್ಷ್ಮಿ ಡಿ.*** & **ಸುಮಾ ಆರ್.****

**DOI: https://doi.org/10.5281/zenodo.22301308**

**ABSTRACT**

ರಾಘವಾಂಕನ ಇತರೆ ಕಾವ್ಯಗಳಲ್ಲಿ ಬರುವ ಪ್ರಮಾಣದಷ್ಟು ವರ್ಣನೆಗಳು ಸಿದ್ಧರಾಮನ ಚರಿತ್ರೆಯಲ್ಲಿ ಬಾರದೆ ಇರಬಹುದು. ಆದರೂ ಕವಿಯ ಕಲ್ಪನೆಯ ಚಿತ್ರ ಮಾತುಗಳಲ್ಲಿ ಸ್ಪಷ್ಟವಾಗಿ ಮೂಡಿಬಂದಿದೆ. ಆದರೂ ತನ್ನ ವರ್ಣನೆಗಳಲ್ಲಿ ಹೊಸತನವನ್ನು ಕಾಪಾಡಿಕೊಂಡು ಬಂದಿರುವುದನ್ನು ನೋಡಬಹುದು. ಇನ್ನೂ ಕಾವ್ಯದ ಶೈಲಿ ಸರಳವಾಗಿದ್ದು ಕಥಾವಿವರಗಳಿಗೆ ಅಗತ್ಯವಿಲ್ಲದನ್ನು ತುರುಕುವ ಸಾಹಸಕ್ಕೆ ಹೋಗಲಿಲ್ಲ, ಪಾಂಡಿತ್ಯ ಪ್ರದರ್ಶನಗೊಳಿಸುವ ಸಂಸ್ಕೃತ ಪದರಚನೆ ಕಾಣಿಸದೆ ಕನ್ನಡ ಸುಲಲಿತತೆ ಎದ್ದು ಕಾಣಿಸುತ್ತಿದೆ. ಕಾವ್ಯದಲ್ಲಿ ಅಲಂಕಾರಗಳ ಗೊಡವೆಗೆ ಹೋಗದೆ ಜಾಗೃತವಾಗಿ ಕವಿಯ ನಾಟಕೀಯ ಕೌಶಲ್ಯ ಕಾಣಬಹುದು. ಸಿದ್ಧರಾಮನ ವ್ಯಕ್ತಿತ್ವವನ್ನು ಕವಿ ಆತ್ಮೀಯವಾಗಿಯೇ ವರ್ಣಿಸುತ್ತಾನೆ, ಆತನ ಅತಿ ಮಾನುಷಚರ್ಯೆಗಳು ವ್ಯಕ್ತಿತ್ವಕ್ಕೆ ಮತ್ತಷ್ಟು ಕಾಂತಿಯನ್ನು ತಂದುಕೊಡುತ್ತವೆ. ನಾಟಕೀಯ ಸನ್ನಿವೇಶಗಳ ಮೂಲಕ ಪ್ರಸಂಗಗಳನ್ನು ಕವಿ ಓದುಗರ ಕಣ್ಮುಂದೆ ನಿಲ್ಲುವಂತೆ ಮಾಡುತ್ತಾನೆ. ಲೌಕಿಕ ಜನರಿಗಿಂತ ಸಿದ್ಧರಾಮ ಭಿನ್ನ ಎಂದು ತೋರಿಸುವುದೇ ಮುಖ್ಯ ಆಶಯವೆಂಬುದು ತಿಳಿಯಬಹುದು.

**KEYWORDS**: ರಾಘವಾಂಕ, ಸಿದ್ಧರಾಮಚರಿತೆ, ವೀರಶೈವಧರ್ಮದ ಸಾತ್ವಿಕಾಂಶ, ವರ್ಣನೆ, ಅಷ್ಟಾದಶವರ್ಣನೆ, ನಿಸರ್ಗ ಸೌಂದರ್ಯ, ಶೈಲಿ, ನಾಟಕೀಯ ಪ್ರತಿಭೆ.

* **ವಿಜಯಲಕ್ಷ್ಮಿ ಡಿ.,** ಸಹಾಯಕ ಪ್ರಾಧ್ಯಾಪಕರು, ರಾಮಯ್ಯ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಮತ್ತಿಕೆರೆ, ಬೆಂಗಳೂರು.

** **ಡಾ. ಸುಮಾ ಆರ್.,** ಪ್ರಾಧ್ಯಾಪಕರು, ಕನ್ನಡ ವಿಭಾಗ, ಎಸ್.ಜೆ.ಬಿ.ಸಿ.ಎಂ.ಎಸ್., ಕನ್ನಡ ಸಂಶೋಧನಾ ಕೇಂದ್ರ, ಕೆಂಗೇರಿ, ಬೆಂಗಳೂರು.

ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಪ್ರಮುಖವಾಗಿ ಗಮನ ಸೆಳೆಯುವ ಕವಿಗಳಲ್ಲಿ ರಾಘವಾಂಕನು ಒಬ್ಬ. ಹರಿಹರ ರಗಳೆಗೆ ಹೆಸರಾದಂತೆ ರಾಘವಾಂಕನು ಷಟ್ಪದಿ ಕಾವ್ಯ ಪರಂಪರೆಯನ್ನು ಆರಂಭಿಸಿದ ಕೀರ್ತಿಗೆ ಭಾಜನನಾದವನು. ಈತನ ಕೃತಿಗಳು ಹರಿಶ್ಚಂದ್ರ ಕಾವ್ಯ, ಸೋಮನಾಥ ಚಾರಿತ್ರ, ಶರಭ ಚಾರಿತ್ರ, ಹರಿಹರ ಮಹತ್ವ, ಸಿದ್ಧರಾಮಚಾರಿತ್ರ, ವೀರೇಶಚರಿತೆ, ಈ ಕಾವ್ಯಗಳು ಧಾರ್ಮಿಕ ದೃಷ್ಟಿಯಿಂದ ಮಹತ್ವದ ಸ್ಥಾನ ಗಳಿಸಿಕೊಂಡಿವೆ.

ರಾಘವಾಂಕನು ಬರೆದಿರುವ ಸಿದ್ಧರಾಮ ಚಾರಿತ್ರವು ಹನ್ನೆರಡನೇ ಶತಮಾನದ ಪ್ರಸಿದ್ಧ ಶಿವಶರಣ ಹಾಗೂ ವಚನಕಾರನೆನಿಸಿದ್ದ ಸಿದ್ಧರಾಮನ ಸಾಧನೆಯ ಬದುಕಿನ ಚಿತ್ರಣವಾಗಿದೆ. ಸಾಧನೆಯ ಶಿಖರವನ್ನು ಮುಟ್ಟಿದ್ದ ಸಿದ್ಧರಾಮನ ವ್ಯಕ್ತಿತ್ವವನ್ನು ಸುಂದರ ಮತ್ತು ಆದರ್ಶಪೂರ್ಣ ಕಾವ್ಯವನ್ನಾಗಿ ಕಡೆದಿದ್ದಾನೆ ಕವಿ ರಾಘವಾಂಕ. ನರಲೋಕವನ್ನು ಉದ್ಧರಿಸಲು ಬಂದ ಶಿವನ ಅವತಾರ ರೂಪಿಯಾದ ಸಿದ್ಧರಾಮನ ಅಲೌಕಿಕ ಸಾಧನೆಯನ್ನು ಅದ್ಭುತವಾಗಿ ವರ್ಣಿಸಿದ್ದಾನೆ ಕವಿ ರಾಘವಾಂಕನು. ಶಿವಯೋಗಿಯ ಶರೀರಂ ವೃಥಾಸವೆಯಲಾಗದು ಅನುಗಂಬನಿತ್ತು ಕಾಯಕಂ ನೆಡೆಯುತಿರಬೇಕು ಎನ್ನುವ ಕಾಯಕ ನಿಷ್ಠೆಯನ್ನು ಸಾಕಾರನಿಷ್ಠೆ ಭೂತಂಗಳೊಳಗನುಕಂಪೆ ಎಂಬ ಧೋರಣೆಯ ಭದ್ರ ತಳಹದಿಯ ಮೇಲೆ ಕಾವ್ಯ ರೂಪುಗೊಂಡಿರುವುದು ಗಮನಾರ್ಹವಾದುದು.

ಸಿದ್ಧರಾಮನ ಕಾರ್ಯಕ್ಷೇತ್ರ ಸೊನ್ನಲಿಗೆ, ಇಲ್ಲಿ ಜನಪರ ಕೆಲಸಗಳಲ್ಲಿ ತೊಡಗುತ್ತಾನೆ. ಮಠವನ್ನು ನಿರ್ಮಿಸುವುದು, ಕೆರೆ ನಿರ್ಮಾಣದಲ್ಲಿ ತೊಡಗುವುದು, ಯೋಗಲಿಂಗಗಳನ್ನು ಸ್ಥಾಪಿಸುವುದು ಇವೇ ಮೊದಲಾದ ಕಾರ್ಯಗಳನ್ನು ಮಾಡುತ್ತ ಕರ್ಮಯೋಗದ ಕಾರ್ಯಕ್ಷೇತ್ರವಾಗುತ್ತದೆ ಸೊನ್ನಲಿಗೆ. ರಾಘವಾಂಕನ ಸಿದ್ಧರಾಮನು ಸ್ವತಃ ಕೈಯಲ್ಲಿ ಗುದ್ದಲಿ ಹಿಡಿದು ಕೆಲಸ ಮಾಡಿದನು. ಅದರ ಮೂಲಕ ಉಳಿದವರರನ್ನು ಕಾಯಕ ನಿಷ್ಠೆಗೆ ಕೊಂಡೊಯ್ಯುತ್ತಾನೆ. ಇಂತಹ ಶಿವಶರಣನ ಜೀವನವನ್ನು ತನ್ನ ಸೃಜನ ಶೀಲ ವರ್ಣನೆ ಮತ್ತು ಶೈಲಿಯಿಂದ ಅದ್ಭುತವಾದ ಕಾವ್ಯ ರಚಿಸಿದ್ದಾನೆ ಎನ್ನುವ ಕೀರ್ತಿಯು ರಾಘವಾಂಕನಿಗೆ ಸಲ್ಲುತ್ತದೆ.

**ಸಿದ್ಧರಾಮ ಚಾರಿತ್ರದಲ್ಲಿ ವರ್ಣನೆಗಳು**

ರಾಘವಾಂಕನ ಇತರೆ ಕಾವ್ಯಗಳಲ್ಲಿ ಬರುವ ಪ್ರಮಾಣದಷ್ಟು ವರ್ಣನೆಗಳು ಸಿದ್ಧರಾಮ ಚಾರಿತ್ರದಲ್ಲಿ ಬಾರದೆ ಇರಬಹುದು. ಆದರೂ ಕವಿ ಕುರಿತ ಕಲ್ಪನೆಯ ಚಿತ್ರ ಅವನ ಮಾತುಗಳಲ್ಲಿ ವ್ಯಕ್ತವಾಗಿದೆ. ಸಿದ್ಧರಾಮನ ಕಥೆಗೆ ಅಷ್ಟಾದಶವರ್ಣನೆಗಳ ಗೊಡವೆಯೇಕೆ ಎನ್ನುತ್ತಲೇ ಕಾವ್ಯದ ಆರಂಭದಲ್ಲಿ ಸಮುದ್ರ–ಪರ್ವತಗಳ ವರ್ಣನೆಗೆ ತೊಡಗುತ್ತಾನೆ. ಆದರೂ ತನ್ನ ವರ್ಣನೆಗಳಲ್ಲಿ ಹೊಸತನವನ್ನು ಕಾಪಾಡಿಕೊಂಡು ಬಂದಿದ್ದಾನೆ ಎಂಬುದಕ್ಕೆ ಸಿದ್ಧರಾಮನ ಜನನದ ಸನ್ನಿವೇಶ ತಕ್ಕ ಉದಾಹರಣೆ:

**ಅಂಬಿಕಾಪತಿ ಲೋಕಮಂ ಸಾಕಲೊಗೆದನೆಂ**

**ದೆಂಬುದಂ ತನ್ನ ದಶಶತ ಕರದಿ ಗಗನವೆಂಬ**
**ದೆಂಬ ಜೇಗಟೆಯಿಂದ ಧರೆಗೆ ಡಂಗುರವೊಯ್ಯಲೆಂದಂದು ನಿಂದಿರ್ದನೋ**
**ಎಂಬತೆ ರವಿಯುದಯ ಗಿರಿಗೆ ಬಂದಂ ಜನಕ**
**ದಂಬವಾ ಪೂಮಳೆಗೆ ಜನನಕ್ಕೆ ಶಿಶುಗೆ ಚೋ**
**ದ್ಯಂಬಟ್ಟರಲಲ್ಲಿ ತನತನಗೆ ಹರಿದರಿದು ನೆರೆದೆರೆದು ನುಡಿನುಡಿದರು**

ಜನನದ ಸಂದೇಶವನ್ನು ಮತ್ತು ಉದ್ದೇಶವನ್ನು ಪ್ರತಿಮೆಯ ಮೂಲಕ ಅತ್ಯಂತ ಕಲಾತ್ಮಕವಾಗಿ ಚಿತ್ರಿಸಿದ್ದಾನೆ. ನಿರ್ದಿಷ್ಟ ಕ್ರಿಯೆಯನ್ನು ಕಾವ್ಯ ಮಾಡುವಾಗ ಕವಿಯು ವರ್ಣನೆಗಳನ್ನು ಭಾವ ಪ್ರಪಂಚದ ಮಾಧ್ಯಮಗಳನ್ನಾಗಿಯೂ ಮಾಡಿಬಿಡುವ ಕುಶಲತೆಯನ್ನು ಹೊಂದಿಬಿಡುತ್ತಾನೆ. ಆರ್.ಸಿ ಹಿರೇಮಠರು ಹೇಳುವಂತೆ ಭಾವ ಪ್ರಪಂಚವನ್ನು ಬಣ್ಣಿಸುವಾಗ ಬಾಹ್ಯ ಪ್ರಪಂಚವನ್ನು ವರ್ಣಿಸುವಾಗ ಭಾವನಾ ಪ್ರಪಂಚವನ್ನು ಉಪಯೋಗಿಸಿ ಎರಡಕ್ಕೂ ಮೆರಗು ಬಂದಿರುವುದು ಕಾಣಬಹುದು, ಎಂದಿದ್ದಾರೆ. ಅದೇನೇ ಇರಲಿ ಕೈಲಾಸದವರಿಗೆ ಸೊನ್ನಲಿಗೆ, ಸುಗ್ಗವ್ವೆಯ ವರ್ಣನೆ, ಈಕೆ ಕಲೆಸಿಕೊಟ್ಟ ಮೊಸರನ್ನದ ವರ್ಣನೆ, ಸಿದ್ಧರಾಮನ ಜನನದ ವರ್ಣನೆ, ಭೂತಬೇತಾಳರ ವರ್ಣನೆ, ಕಾಳರಕ್ಕಸಿಯ ವರ್ಣನೆ, ಆದಿಲಿಂಗದ ವರ್ಣನೆ, ಶ್ರೀ ಶೈಲ,ನರಕ, ಲಿಂಗಾಭಿಕ್ಷೆ, ತುಪ್ಪ ಭಿಕ್ಷೆಗಳ ವರ್ಣನೆ ಮುಂತಾದವು ಕಥಾ ನಿರೂಪಣೆಗೆ ಅನುಸಾರವಾಗಿಯೇ ಬಂದಿದ್ದನ್ನು ಕಾಣಬಹುದು.

ಸೂರ್ಯಚಂದ್ರ, ಮಳೆಗಾಲ, ಸಮುದ್ರ, ಪರ್ವತ ಮುಂತಾದವನ್ನು ಕುರಿತು ಪ್ರಕೃತಿ ವರ್ಣನೆಗಳು ಹಿತಮಿತವಾಗಿಯೇ ಮೂಡಿಬಂದಿದೆ. ಕಥೆಯನ್ನು ಅನಾವಶ್ಯಕವಾಗಿ ವರ್ಣನೆಗಳಿಂದ ವಿಸ್ತರಿಸುವ ಯೋಜನೆಯು ಕವಿಗೆ ಇರಲಿಲ್ಲವೆನ್ನುವುದು ಕಾಣಿಸುತ್ತದೆ. ಈ ಕಾವ್ಯದಲ್ಲಿ ಪ್ರಮುಖವಾಗಿ ಬೇಕಾಗಿರುವುದು ಸಿದ್ಧರಾಮನ ಕಾಯಕ ವಿವರ, ಇದು ಓದುಗರಿಗೆ ಮುಖ್ಯವಾದುದು ಎಂಬುದರ ಔಚಿತ್ಯ ಇಲ್ಲಿ ನೋಡಬಹುದು. ಅದು ಅದ್ಭುತವಾಗಲಿ ಸಾಮಾನ್ಯವಾಗಲಿ ಔಚಿತ್ಯವರಿತು ಕವಿ ಕಲ್ಪನೆಯಲ್ಲಿ ಮೂಡಿದ ಮಹಾಪುರುಷನ ಚಿತ್ರವನ್ನು ಸರ್ವರೂ ಆಶ್ಚರ್ಯ ಚಕಿತರಾಗಿ ನೋಡುವಂತೆ ಬಿಡಿಸಿದ್ದಾನೆ ಕವಿ ರಾಘವಾಂಕ.

ಕೃತಿಯ ನಾಯಕ ಸಿದ್ಧರಾಮನ ಜನನ ಬಾಲ್ಯ ಬೆಳವಣಿಗೆ ಪಡೆದ ಸಿದ್ಧಿ ಇವುಗಳ ಚಿತ್ರಣವನ್ನು ರಾಘವಾಂಕ ತುಂಬಾ ಅಡಕವಾಗಿ ಚಿತ್ರಿಸಿದ್ದಾನೆ. ಗಾತ್ರದಲ್ಲಿ ಕವಿಯ ಇತರೆ ಕಾವ್ಯಗಳಿಗಿಂತ ಚಿಕ್ಕದಾದರೂ ಸಿದ್ಧರಾಮನ ವ್ಯಕ್ತಿತ್ವವನ್ನು ದಕ್ಷತೆಯನ್ನು ಒಳ್ಳೆಯ ಮನಸ್ಸನ್ನು ಅಭಿವ್ಯಕ್ತಿಸುವಲ್ಲಿ ಅತ್ಯಂತ ಯಶಸ್ಸು ಪಡೆದಿದೆ. ಒಂದು ವಿಷಯ ಹೇಳಲು ಹೊರಡುವಾಗ ಕವಿ ಹತ್ತಾರು ವಿಷಯಗಳನ್ನು ಇದಕ್ಕೆ ಪೂರಕವಾಗಿ ಮೆರೆಸಿರುವುದರಿಂದ ಕವಿಯ ಸೃಜನಶೀಲತೆ ಬಗೆಗೆ ಎಂಥವರಿಗೂ ಹೆಮ್ಮೆ ಮೂಡದಿರದು. ನಿಸರ್ಗ ಸೌಂದರ್ಯ, ವೇಶ್ಯಾವಾಟಿ ವಿಹಾರಗಳು, ಬೇಟೆ ನಾಯಿಗಳು ಎಲ್ಲವುಗಳ ವಿವರವೂ ಲಭ್ಯವಾಗುತ್ತದೆ, ಆದರೆ ಸಿದ್ಧರಾಮಚಾರಿತ್ರವು ಅಂಥವುಗಳ ಗೊಡವೆಗೆ ಹೋಗಿಲ್ಲ. ಅಲಂಕಾರಗಳ ವಿಷಯದಲ್ಲೂ ಕವಿಯ ಜಾಗೃತ ಮನಸ್ಸು ಕೆಲಸ ಮಾಡಿರುವುದನ್ನು ನೋಡಬಹುದು.

## ಸಿದ್ಧರಾಮ ಚಾರಿತ್ರದಲ್ಲಿನ ಶೈಲಿ:

ಕಾರಣಿಕ ಪುರುಷನಾದ, ಪುಣ್ಯದಾಗರನೆನಿಸಿದ ಸಿದ್ಧರಾಮನ ಕಥೆಯನ್ನು ಕಥಾವಿವರಗಳಿಗೆ ಅಗತ್ಯವಿಲ್ಲದ್ದನ್ನು ತುರುಕುವ ಸಾಹಸಕ್ಕೆ ಹೋಗದೆ ಸೌಂದರ್ಯ ರಸಗಳಿಗೆ ಅಂಟಿಕೊಂಡು ಬಂದಂತಹ ವಿವರಗಳನ್ನು ಕೊಡುವಲ್ಲಿ ಹೆಚ್ಚು ಗಮನ ಹರಿಸಿದಂತೆ ಕಾಣುತ್ತದೆ. "ಸುಲಲಿತವಾದ ಪುಣ್ಯಕಥನ" ವಾಗಿರುವುದರಿಂದ ಸರ್ವರರಿಯಲು ಪೇಳ್ವೆನೆಂದಿರುವುದರಿಂದ ಸರಳವಾದ ಶೈಲಿ ಈ ಕಾವ್ಯದ ಪ್ರಮುಖ ಗುಣವಾಗಿದೆ. ಪಾಂಡಿತ್ಯ ಪ್ರದರ್ಶನಗೊಳಿಸುವ ಸಂಸ್ಕೃತ ಪದ ರಚನೆಗಳು ಇಲ್ಲಿ ಕಾಣಿಸದೆ ಕನ್ನಡದ ಸುಲಲಿತತೆ ಎದ್ದು ಕಾಣಬರುತ್ತದೆ. ಶಬ್ದಾಲಂಕಾರಗಳ ಗೊಡವೆಗೆ ಹೋಗದೆ ಕವಿ ನೇರವಾಗಿಯೇ ಕಥೆಗೆ ತೊಡಗಿರುತ್ತಾನೆ.

ಕಾವ್ಯದಲ್ಲಿ ನಡೆಯುವ ಸಂಭಾಷಣೆಯು ನಾಟಕೀಯವಾಗಿ ಮೂಡಿಬಂದಿರುವುದನ್ನು ಕಾಣಬಹುದು, ಇಲ್ಲಿ ಕವಿಯ ಜಾಣ್ಮೆಯನ್ನು ನೋಡಬಹುದು. ಸಿದ್ಧರಾಮ ಮತ್ತು ಮಲ್ಲಯ್ಯ, ಪರಿಷೆಯ ಜನ ಮತ್ತು ಬಾಲಕ ಸಿದ್ಧರಾಮ, ಶಿವ ಮತ್ತು ಸಿದ್ಧರಾಮನ ನಡುವೆ ಜರುಗುವ ಸಂಭಾಷಣೆಯಲ್ಲಿ ನಾವು ನಾಟಕೀಯ ಕೌಶಲ್ಯವನ್ನು ಕಾಣಬಹುದು. ಅಲ್ಲದೆ ಕವಿ ತನ್ನ ಕಾಲದಲ್ಲಿ ಬಳಕೆಯಲ್ಲಿದ್ದ ದೇಸಿನುಡಿ, ಪಡೆನುಡಿಯ ಬಳಕೆಯ ಮಾತುಗಳನ್ನು ನಂಬಿಕೆಗಳನ್ನು ಕಾವ್ಯದಲ್ಲಿ ತಂದು ಕಾವ್ಯದ ಮಹತ್ವವನ್ನು, ಸೌಂದರ್ಯವನ್ನು ಮತ್ತಷ್ಟು ಹೆಚ್ಚಿಸಿದೆ. ಉದಾ: ಎತ್ತಿದೆನು ಕೈಯ, ನಾರುಬೇಕು ಪಾಪಗೆಸರು, ಸೊಗಸಿನ ಸುಗ್ಗಿ, ಮಡದಿಯರ ಮಾಣಿಕ್ಯ, ಅಬ್ಬರಿಸಿ ಉಬ್ಬಿಸು, ಕುಡುಗೋಲು, ಕೊಣಕಿಡು, ಹುಡಿಗುಟ್ಟು, ಇತ್ಯಾದಿ.

ಗಾದೆ ಮಾತುಗಳಂತೂ ಹೇರಳವಾಗಿ ಬಳಕೆಗೊಂಡಿವೆ. ನಾಲ್ವರ ಕಂಬಳಿಯ ಬೆಂಬಳಿಯೊಳಿಪ್ಪೆ, ವಾರಣಾಸಿಯ ಬಿಟ್ಟುಹೋಗು, ಮುಚ್ಚಿದ ಮಡಕೆಯಂತೆ ಹೊರಗೆ ಮೆರೆ, ಪೊಡಮಡಲು ದೇಗುಲಂಬಿರ್ದುದು, ಕರಣಂಗಳೆಲ್ಲವಂ ಕಣ್ಣ ಬಾಗಿಲೊಳಿಟ್ಟು ಕೊಂಡೊಯ್ದೆ– ಇತ್ಯಾದಿಗಳು. ಮರನ ಮರೆಯಗ್ನಿಯಂತೆ, ಪುಷ್ಪದ ಮರೆಯ ಫಲದಂತೆ, ಜಂಗಮ ರೂಪಿನಲಿ ಸಿದ್ಧರಾಮನ ಪರೀಕ್ಷೆಗೆ ಬಂದ ಶಿವ ಮುಂತಾದ ಹೋಲಿಕೆಗಳಂತೂ ಕಾವ್ಯದಲ್ಲಿ ಹೇರಳವಾಗಿ ಬರುತ್ತವೆ. ಕಾವ್ಯದಲ್ಲಿ ಉಪಮೆಗಳದೇ ಕಾರುಬಾರು, ಭಾವಪೂರ್ಣವೂ ಅರ್ಥಪೂರ್ಣವೂ ಆಗಿ ರಸವು ಪೋಷಕವಾಗಿವೆ. ಕಾವ್ಯದಲ್ಲಿ ಕವಿ ಸಿದ್ಧರಾಮನ ವ್ಯಕ್ತಿತ್ವಕ್ಕೆ ಘನತೆಯನ್ನು ತಂದುಕೊಡುವ ರೀತಿಯಲ್ಲಿ ಕಥಾ ಸಂವಿಧಾನವನ್ನು ರೂಪಿಸಿದ್ದಾನೆ. ಹೀಗಾಗಿ ನಿರೂಪಣೆಯೇ ಹೆಚ್ಚಾಗಿ ಕೆಲವು ಕಡೆ ಕಾವ್ಯ ತನ್ನ ಆಕರ್ಷಣೆಯನ್ನು ಕಳೆದುಕೊಂಡಿದೆಯೇನೋ ಎಂದು ಭಾಸವಾಗುತ್ತದೆ.

ರಾಘವಾಂಕನು ಪ್ರಸ್ತುತ ಸಿದ್ಧರಾಮಚಾರಿತ್ರವನ್ನು ವಿಶಿಷ್ಟವಾಗಿ, ರೂಪಿಸಿದ್ದಾನೆ. ಶಿವಶರಣರ ಮೌಲ್ಯಕ್ಕಾಗಲಿ, ವೀರಶೈವ ಧರ್ಮಕ್ಕಾಗಲೀ ಯಾವುದೇ ರೀತಿಯ ಧಕ್ಕೆ ತರದೆ ಐತಿಹಾಸಿಕ ದೃಷ್ಟಿಯಿಂದ ಮಹತ್ವದ ಸ್ಥಾನ ಪಡೆದುಕೊಂಡಿದೆ.

**ಪರಾಮರ್ಶನ ಗ್ರಂಥಗಳು:**

1. ತಿಪ್ಪೇಸ್ವಾಮಿ ಜಿ. ಆರ್., (2000), ಅಭಿಮುಖ, ಮೈಸೂರು: ಚೇತನಾ ಬುಕ್ ಹೌಸ್.
2. ಕಲ್ಬುರ್ಗಿ ಎಂ. ಎಂ., (2004), ರಾಘವಾಂಕನ ಸಮಗ್ರ ಕೃತಿಗಳು, ಹಂಪಿ: ಕನ್ನಡ ವಿಶ್ವವಿದ್ಯಾಲಯ.
3. ಮರಿಯಪ್ಪ ಭಟ್ಟ ಎಂ., (1960), ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ, ಮೈಸೂರು: ಭಾರತೀ ಪ್ರಕಾಶನ.
4. ವಿದ್ಯಾಶಂಕರ ಎಸ್., (2004), ಸಿದ್ಧರಾಮಚಾರಿತ್ರಯ ಸಂಗ್ರಹ, ಬೆಂಗಳೂರು: ಪ್ರಿಯದರ್ಶಿನಿ ಪ್ರಕಾಶನ.
5. ನರಸಿಂಹಾಚಾರ್ ಡಿ. ಎಲ್., (1951), ಸಿದ್ಧರಾಮಚರಿತ್ರೆಯ ಸಂಗ್ರಹ, ಮೈಸೂರು: ಕಾವ್ಯಾಲಯ.